SEPTEMBER 13, 2025

# AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಕೇಂದ್ರದ ಸರಕು ಮತ್ತು ಸೇವಾ ತೆರಿಗೆ ಮಂಡಳಿ** ಶಿಫಾರಸಿನಂತೆ, ಸರಕು ಮತ್ತು ಸೇವಾ ತೆರಿಗೆ ಅಧಿನಿಯಮದಡಿ, ನಿರ್ಧರಿಸಲಾದ ನೂತನ ಪರಿಷ್ಕೃತ ದರಗಳು, ಈ ತಿಂಗಳ 22ನೇ ತಾರೀಖಿನಿಂದ, ಜಾರಿಗೊಳ್ಳಲಿವೆ. ಧಾರವಾಡ ಜಿಲ್ಲೆಯಾದ್ಯಂತ, ವಾಣಿಜ್ಯೋದ್ಯಮ ಸಂಘ ಹಾಗೂ ವ್ಯಾಪಾರಸ್ಥರ ಸಂಘಗಳ ಮೂಲಕ, ವಾಣಿಜ್ಯ ತೆರಿಗೆ ಇಲಾಖೆ, ಜಿ.ಎಸ್.ಟಿ. ನೂತನ ಪರಿಷ್ಕೃತ ದರಗಳ ಕುರಿತು, ಮಾರಾಟಗಾರರು ಹಾಗೂ ಖರೀದಿದಾರರಿಗೆ ಜಾಗೃತಿ ಮೂಡಿಸುವ ಅಭಿಯಾನ ಆಯೋಜಿಸಿದೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ವಾಣಿಜ್ಯೋದ್ಯಮ ಸಂಘದ, ಕಾರ್ಯಕಾರಿ ಸಮಿತಿ ಸದಸ್ಯ, ಉದಯ ಯಂಡಿಗೇರಿ.

<><><>

**ಹಾಸನ ಜಿಲ್ಲೆ, ಹೊಳೆನರಸೀಪುರ** ತಾಲೂಕು, ಮೊಸಳೆ ಹೊಸಳ್ಳಿ ಬಳಿ, ಗಣಪತಿ ವಿಸರ್ಜನಾ ಮೆರವಣಿಗೆ ಸಾಗುತ್ತಿದ್ದ ವೇಳೆ, ಟ್ರಕ್ ಹಾಯ್ದು ಪರಿಣಾಮ, 9 ಜನ ಸ್ಥಳದಲ್ಲೇ ಸಾವನ್ನಪ್ಪಿ, ಇಪ್ಪತ್ತಕ್ಕೂ ಹೆಚ್ಚು ಜನ, ಗಾಯಗೊಂಡ ದುರ್ಘಟನೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಶೋಕ ವ್ಯಕ್ತ ಪಡಿಸಿದ್ದಾರೆ. ತಲಾ ಎರಡು ಲಕ್ಷ ರೂಪಾಯಿ ಪರಿಹಾರ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

**ಗಾಯಾಳುಗಳನ್ನು ಹಾಸನದ** ಹಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತ ದೇಹಗಳನ್ನು, ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದ್ದು, ಬಹುತೇಕರು ವಿದ್ಯಾರ್ಥಿಗಳಾಗಿದ್ದರು. ಜನಪ್ರತಿನಿಧಿಗಳು ಕುಟುಂಬಗಳಿಗೆ ಸಾಂತ್ವನ ಹೇಳಿದರು.

<><><>

**ಮುಖ್ಯಮಂತ್ರಿ ಸಿದ್ದರಾಮಯ್ಯ** ಘಟನೆ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ, ತಲಾ 5 ಲಕ್ಷ ರೂಪಾಯಿ ಪರಿಹಾರ ಹಾಗೂ ಗಾಯಗೊಂಡವರ ಚಿಕಿತ್ಸೆ ವೆಚ್ಚವನ್ನು ಭರಿಸಲಾಗುವುದು, ಎಂದಿದ್ದಾರೆ.

<><><>

**'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ,** ಇಂದು, 3ನೇ ರಾಷ್ಟ್ರೀಯ ಲೋಕ ಅದಾಲತ್ ರಾಜ್ಯಾದ್ಯಂತ ಆಯೋಜಿತವಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ, ರಾಜಿ ಸಾಧ್ಯತೆಯ ಪ್ರಕರಣಗಳನ್ನು, ಕಕ್ಷಿದಾರರ ಸಮಕ್ಷಮ ಇತ್ಯರ್ಥಪಡಿಸಲು, ಇಂದು ಜನತಾ ನ್ಯಾಯಾಲಯ, ಜರುಗುತ್ತಿದೆ.

<><><>

**ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ,** 2 ಸಾವಿರದ 9 ನೂರಾ 92, ಪೌರ ಕಾರ್ಮಿಕರ ಹುದ್ದೆಗಳ ಪೈಕಿ, 492 ಭರ್ತಿ ಮಾಡಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ಗೃಹ ಕಚೇರಿ, ಕೃಷ್ಣದಲ್ಲಿ, ಪೌರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಅಹವಾಲು ಆಲಿಸಿದರು. ನಗರ ಸ್ಥಳೀಯ ಸಂಸ್ಥೆಗಳಲ್ಲಿ, ನೇರ ವೇತನದಡಿ, ಪೌರ ಕಾರ್ಮಿಕರಾಗಿ ಕೆಲಸ ಮಾಡುವವರು, ಅಕಾಲಿಕವಾಗಿ ಮೃತಪಟ್ಟಲ್ಲಿ, ಪೌರ ಕಾರ್ಮಿಕರ ಅವಲಂಬಿತರಿಗೆ, 10 ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು, ಎಂದರು.

<><><>

**'ಪೌಷ್ಟಿಕ ಆಹಾರ ಭದ್ರತೆಗೆ,** ಮಣ್ಣಿನ ಆರೋಗ್ಯ ಹಾಗೂ ಸಾಂಪ್ರದಾಯಿಕ ತಳಿಗಳು' ಶೀರ್ಷಿಕೆಯಡಿ, ಧಾರವಾಡ ಕೃಷಿ ವಿಶ್ವವಿದ್ಯಾಲಯ, ನಾಲ್ಕು ದಿನಗಳ, ಕೃಷಿ ಮೇಳಕ್ಕೆ, ಇಂದು ಚಾಲನೆ ನೀಡಿದೆ. ಕೃಷಿ ಮೇಳ ವೇದಿಕೆಯಲ್ಲಿ, ಇಂದು ಮಧ್ಯಾಹ್ನ 12 ಗಂಟೆ 30 ನಿಮಿಷಕ್ಕೆ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗೂ ಪೌಷ್ಟಿಕ ಆಹಾರ ಭದ್ರತೆ ಕುರಿತು, ವಿಚಾರ ಗೋಷ್ಠಿ ಜರುಗಲಿದೆ. ಮಧ್ಯಾಹ್ನ 2.30ಕ್ಕೆ, ಆವಿಷ್ಕಾರಿ ರೈತರಿಂದ, ಅನುಭವ ಹಂಚಿಕೆ ಹಾಗೂ ಸಂಜೆ 4.30ಕ್ಕೆ ಕನ್ನಡ ಕೃಷಿ ಗೋಷ್ಠಿ, ಆಯೋಜಿತವಾಗಿದೆ.

<><><>

**ಯಾಂತ್ರೀಕೃತ ವಿಧಾನದ ಮೂಲಕ,** ಭತ್ತದ ನಾಟಿಯನ್ನು, ಮಹಿಳೆಯರು ಕೂಡ ಮಾಡಲು ಸಾಧ್ಯ ಎಂದು, ಮಂಡ್ಯ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಕೆ.ಆರ್. ನಂದಿನಿ, ಸ್ವತಃ ಭತ್ತ ನಾಟಿ ಮಾಡಿ, ತೋರಿಸಿದರು. ಹೊಳಲು ಗ್ರಾಮದ, ದಕ್ಷ ಯಂತ್ರ ನಾಟಿ ಸಸಿಮಡಿ ತಯಾರಿಕಾ ಘಟಕದಲ್ಲಿ, ಪ್ರಾತ್ಯಕ್ಷಿಕೆ ಕೈಗೊಂಡು, ಮಾತನಾಡಿದರು. ಭತ್ತ ನಾಟಿಗೆ ಯಂತ್ರ ಬಳಸಲು, ನಿರ್ವಹಿಸಲು ಮಹಿಳೆಯರಿಗೆ ಸಾಧ್ಯವಿಲ್ಲ ಎಂಬುದನ್ನು ತೊಡೆದು ಹಾಕುವಂತೆ, ತರಬೇತಿಗೆ ಬಂದಿದ್ದ, ಸ್ವ–ಸಹಾಯ ಸಂಘದ ಮಹಿಳೆಯರಿಗೆ, ಮನವಿ ಮಾಡಿದರು.

<><><>

**ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ,** ಪ್ರಧಾನಮಂತ್ರಿ ಅಮೃತ ಭಾರತ ಯೋಜನೆಯಡಿ ಆಯ್ಕೆಯಾದ, ಘಟಪ್ರಭಾ ರೈಲು ನಿಲ್ದಾಣಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾಗಿ, ಬೆಳಗಾವಿ ಸಂಸದ, ಜಗದೀಶ ಶೆಟ್ಟರ ತಿಳಿಸಿದ್ದಾರೆ.

<><><>

**ರಾಯಚೂರು ವಿಮಾನ** ನಿಲ್ದಾಣದ, ರನ್ ವೇ, ಏರ್ ಟ್ರಾಫಿಕ್ ಕಂಟ್ರೋಲ್ ಟಾವರ್ ಕಾಮಗಾರಿಯನ್ನು, ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ, ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿ ಕೆ.ನಿತೀಶ ಸೂಚಿಸಿದ್ದಾರೆ. ಯರಮರಸ್ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ, ಅವರು ಪರಿಶೀಲಿಸಿದರು.

<><><>

**ಕೈಗಾರಿಕೆಗಳ ಖಾತೆ ಸಚಿವ,** ಎಂ.ಬಿ.ಪಾಟೀಲ, ಜಪಾನ ಪ್ರವಾಸ ಕೈಗೊಂಡಿದ್ದಾರೆ. ಜಪಾನ ದೇಶದ, 130 ವ ರ್ಗಗಳ, ಐತಿಹಾಸಿಕ, ಸುಮಿತೊಮೊ ಕೆಮಿಕಲ್‌ನ ಅಂಗ ಸಂಸ್ಥೆ, ಇನ್‌ಬಟಾ ಟ್ರೇಡಿಂಗ್ ಗ್ರೂಪ್‌ನ ಪ್ರಮುಖರೊಂದಿಗೆ, ಅವರು ಚರ್ಚಿಸಿದರು. ಮುಂಬರುವ 2027 ರ ಒಳಗೆ, ರಾಜ್ಯದಲ್ಲಿ ಕ್ರೀಡಾ ಉಪಕರಣ ತಯಾರಿಸಲು, ಕಂಪೆನಿ ಹೂಡಿಕೆ ಮಾಡಲಿದೆ, ಎಂದರು.

<><><>

**ಕಲಬುರಗಿ ಜಿಲ್ಲೆ, ಹೀರಾಪುರ** ವಲಯದ, ಇಕ್ಬಾಲ್ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ, ರಾಷ್ಟ್ರೀಯ ಪೋಷಣ ಮಾಸಾಚರಣೆಗೆ, ಹಿರಿಯ ಸಿವಿಲ್ ನ್ಯಾಯಾಧೀಶ ಶ್ರೀನಿವಾಸ ನವಲೆ ಚಾಲನೆ ನೀಡಿದರು.

<><><>

**ಕೊಪ್ಪಳದ, ವದಗನಾಳ ಅಂಗನವಾಡಿ** ಕೇಂದ್ರದಲ್ಲಿ, 8ನೇ ರಾಷ್ಟ್ರೀಯ ಪೋಷಣ ಮಾಸಾಚರಣೆಯನ್ನು, ಹಿರಿಯ ಸಿವಿಲ್ ನ್ಯಾಯಾಧೀಶ ಮಹಾಂತೇಶ ದರಗದ ಉದ್ಘಾಟಿಸಿದರು.

<><><>

**ಕೇಂದ್ರದ ನವ ಹಾಗೂ ನವೀಕರಿಸಬಹುದಾದ,** ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಅವರ ಅಧ್ಯಕ್ಷತೆಯಲ್ಲಿ, ಕೇಂದ್ರ ಪುರಸ್ಕೃತ ಯೋಜನೆಗಳ ದಿಶಾ ಸಭೆ, ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾ ಭವನದಲ್ಲಿ, ಇಂದು ಮಧ್ಯಾಹ್ನ 3 ಗಂಟೆಗೆ ಜರುಗಲಿದೆ.

<><><>

**ರಾಜ್ಯದ ಉತ್ತರ ಒಳನಾಡು ಜಿಲ್ಲೆಗಳಲ್ಲಿ,** ಇಂದು ಚದುರಿದಂತೆ, ವ್ಯಾಪಕವಾಗಿ, ಹಗುರದಿಂದ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷಿಸಲಾಗಿದೆ.

ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಅಲ್ಲಲ್ಲಿ ಚದುರಿದಂತೆ, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ, ತಿಳಿಸಿದೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**